International Journal of Kannada Research
www.kannadajournal.com

ISSN: 2454–5813
IJKR 2019; 5(2): 79-81
© 2019 IJKR
www.kannadajournal.com
Received: 13-02-2019
Accepted: 15-03-2019

**ರಮೇಶ ರಾ.**
ಕಮತಗಿ ಅತಿಥಿ ಉಪನ್ಯಾಸಕರು,
ಸರಕಾರಿ ಪ್ರಥಮ ದರ್ಜೆ ಕಾಲೇಜು,
ಬನಹಟ್ಟಿ

**Correspondence**
**ರಮೇಶ ರಾ.**
ಕಮತಗಿ ಅತಿಥಿ ಉಪನ್ಯಾಸಕರು,
ಸರಕಾರಿ ಪ್ರಥಮ ದರ್ಜೆ ಕಾಲೇಜು,
ಬನಹಟ್ಟಿ

# ಅಪರೂಪದ ಕಲಾವಿದ ಬಾಬು ಬೆಳ್ಳುಬ್ಬಿ

**ರಮೇಶ ರಾ.**

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಆಸಂಗಿ ಒಂದು ಚಿಕ್ಕ ಗ್ರಾಮ. ಈ ಗ್ರಾಮದ ದಕ್ಷಿಣ ದಿಕ್ಕಿಗೆ ಬನಹಟ್ಟಿ ನಗರ. ಉತ್ತರಕ್ಕೆ ಕೃಷ್ಣಾ ನದಿ. ಕೃಷ್ಣಾ ನದಿಯ ಬಯಲು ಪ್ರದೇಶದ ಈ ಊರು ಫಲವತ್ತಾದ ಮಣ್ಣು ಭೂಮಿಯನ್ನು ಹೊಂದಿದೆ. ಇಲ್ಲಿಯ ಜನರ ಮುಖ್ಯ ಉದ್ಯೋಗ ಒಕ್ಕಲುತನ ಮತ್ತು ನೇಕಾರಿಕೆ. ಕೆಲವರು ಸಣ್ಣಪುಟ್ಟ ಸ್ವತಂತ್ರ ಉದ್ಯೋಗ ಕೈಗೊಂಡು ಬದುಕು ಸಾಗಿಸುತ್ತಿರುವರು. ಈ ಊರಿನ ಜನರ ಒಂದು ವಿಶೇಷತೆ ಎಂದರೆ ತಮ್ಮ ಬದುಕಿನ ಜೊತೆಗೆ ಕಲೆಯನ್ನು ಗುರುತಿಸಿ, ಗೌರವಿಸುವುದು. ಹಾಗಾಗಿ ಈ ಊರು ಕಲಾಕಾರರ ಊರು ಎನಿಸಿದೆ. ಕಲಾಕಾರರ ತವರು ನೆಲೆಯೆಂದೆ ಪ್ರಸಿದ್ಧವಾದ ಜಮಖಂಡಿ ಪಟ್ಟಣವು, ಸಾಕಷ್ಟು ಕಲಾ ಪ್ರತಿಭೆಗಳ ಜನ್ಮಸ್ಥಳ. ಕಲೆ ಎನ್ನುವುದು ಎಲ್ಲರಿಗೂ ಸಿದ್ಧಿಸಲಾರದು. ಆದರೆ ಜನಪದರು ಕಲೆಯಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡಿರುವುದು ಕಂಡುಬರುತ್ತದೆ. ಶ್ರೀವಿಜಯ ಕವಿಯು ತನ್ನ 'ಕವಿರಾಜಮಾರ್ಗ' ಲಾಕ್ಷಣಿಕ ಕೃತಿಯಲ್ಲಿ ಹೇಳಿದಂತೆ 'ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್' ಎಂಬ ಮಾತು ಇಲ್ಲಿನ ಜನಪದರಿಗೆ ಸಂಪೂರ್ಣ ಅನ್ವಯಿಸುತ್ತದೆ. ಕಲೆ ನಿಂತ ನೀರಾಗಬಾರದು. ಹರಿಯುವ ನೀರಾಗಬೇಕು. ಎಲ್ಲ ಕಲೆಗಳು ಎಲ್ಲರಲ್ಲಿ ಇರುವುದಿಲ್ಲ. ಮನುಷ್ಯನು ಛಲಗಾರನಾಗಬೇಕು. ಪರಿಶ್ರಮ ಪಟ್ಟರೆ ಮನುಷ್ಯ ಅಸಾಧ್ಯವಾದುದನ್ನು ಸಾಧ್ಯ ಮಾಡುತ್ತಾನೆ ಎಂಬುದನ್ನು ಬಹಳಷ್ಟು ಜನಪದ ಕಲಾವಿದರು ತೋರಿಸಿಕೊಟ್ಟಿದ್ದಾರೆ. ಅಸಾಧ್ಯವಾದುದನ್ನು ಸಾಧಿಸಿದವರಲ್ಲಿ ಬಾಬು ರಾಜೇಸಾಬ ಬೆಳ್ಳುಬ್ಬಿಯವರು ಒಬ್ಬ ಅಪರೂಪದ ಜನಪದ ಕಲಾವಿದರಾಗಿದ್ದಾರೆ.

ಬಾಬು ಬೆಳುಬ್ಬಿಯವರು ಕ್ರಿ.ಶ. 1956 ರಲ್ಲಿ ತಂದೆ ರಾಜೇಸಾಬ, ತಾಯಿ ಲಾಲಮಾ ಅವರ ಉದರದಲ್ಲಿ ಮುಸ್ಲಿಂ ಕುಟುಂಬದಲ್ಲಿ ಜನಿಸಿದರು. ಇವರ ಜನನ ಬಿಜಾಪೂರ ಸರಕಾರಿ ಆಸ್ಪತ್ರೆಯಲ್ಲಾಯಿತು. ವಿಜಯಪುರ ಅವರ ದೊಡ್ಡಮ್ಮನ ಊರು. ಇವರದು ಕಡುಬಡತನ ಕುಟುಂಬ. ತಾಯಿ ಲಾಲಮಾ ಕೂಲಿ ಮಾಡಿ ಬದುಕು ಸಾಗಿಸುತ್ತಿದ್ದರು. ಲಾಲಮಾರು ಒಬ್ಬ ಜನಪದ ಕಲಾವಿದರು. ಸಾಕಷ್ಟು ಸೋಬಾನ ಪದಗಳನ್ನು ಹಾಡುತ್ತಿದ್ದರು. ಇವರ ಆರ್ಥಿಕ ಸ್ಥಿತಿ ತುಂಬಾ ಗಂಭೀರವಾಗಿತ್ತು. ಹೀಗಾಗಿ ಮಗನನ್ನು ಶಾಲೆಗೆ ಕಳಿಹಿಸುವುದು ದೂರದ ಮಾತಾಯಿತು. ಆಸಂಗಿ ಚಿಕ್ಕ ಗ್ರಾಮವಾದರೂ ಕಲೆಗೆ ಬಡತನವಿಲ್ಲ. ಸಾಕಷ್ಟು ಕಲಾಕಾರರನ್ನು ಒಳಗೊಂಡಿದೆ. ಬಾಬುರವರ ಮನೆ ಹತ್ತಿರವೇ ಒಂದು ನಾಟಕ ಶಾಲೆಯಿತ್ತು. ಅಂದರೆ ಒಂದು ಸಣ್ಣ ಕೋಣೆ. ಅಲ್ಲಿ ಪ್ರತಿನಿತ್ಯ ನಾಟಕ ಬಯಲಾಟಗಳನ್ನು ಅಭ್ಯಸಿಸುತ್ತಿದ್ದರು. ಅಲ್ಲಿ ಸಾಕಷ್ಟು ಜನರು ಸೇರುತ್ತಿದ್ದರು. ಅವರಲ್ಲಿ ಬಾಬುರವರು ಒಬ್ಬರು. ಅಲ್ಲಿನ ಪ್ರದರ್ಶನಗಳನ್ನು ನೋಡಿ ಬಾಬುರವರಿಗೆ ಕಲೆಯ ಮೇಲೆ ಆಸಕ್ತಿ ಬೆಳೆಯತೊಡಗಿತು. ಇವರು ರಾಮಚಂದ್ರ ಪಟವರ್ಧನರನ್ನು ಗುರುವನ್ನಾಗಿ ಸ್ವೀಕರಿಸಿ, ನಾಟಕ ಶಾಲೆಗೆ ಪಾದಾರ್ಪಣೆ ಮಾಡಿದರು. ಪಟವರ್ಧನರು ಜಮಖಂಡಿ ಸರಕಾರರ ವಂಶಸ್ತರು. ಒಳ್ಳೆಯ ಕಲಾವಂತರು. ಬಾಬುರವರು ಅನಕ್ಷರಸ್ತರಾದರೂ ಸಹ ನಮಗೆ ನಾಟಕದ ಮಾತುಗಳನ್ನು ಡೈಲಾಗಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಲು ಯಾವುದೇ ತೊಂದರೆಯಾಗಲಿಲ್ಲ ಎಂದು ಹೇಳುತ್ತಾರೆ.

ಇವರ ಮೊದಲ ನಾಟಕ "ಸಂಪತ್ತಿಗೆ ಸವಾಲ". ಇದನ್ನು 1970 ರಲ್ಲಿ ಆಡಿದರು. ಈ ನಾಟಕದಲ್ಲಿ ತಿನ್ನವ್ವಳ ಪಾತ್ರದಲ್ಲಿ ಮೊದಲ ಬಾರಿಗೆ ಸ್ತ್ರೀ ವೇಷದಲ್ಲಿ ಕಾಣಿಸಿಕೊಳ್ಳುವರು. ಸೀರೆ ಉಡುವುದರಲ್ಲಿ ಮುಜಗರ ಅನಿಸಿದರೂ ನಾಟಕದ ಹುಚ್ಚು ಅದನ್ನು ಮರೆಮಾಡಿತು. ಕ್ರಿಶ 1971 ರಲ್ಲಿ "ರತ್ನ ಮಾಂಗಲ್ಯ" ನಾಟಕದಲ್ಲಿ ಮಾಳಿ ಪಾತ್ರದಲ್ಲಿ ಗುರುತಿಸಿಕೊಳ್ಳುವರು. ಅಲ್ಲಿಯೂ ಸಹ ಸ್ತ್ರೀವೇಷ. "ಬಸ್ ಕಂಡಕ್ಟರ" ನಾಟಕದಲ್ಲಿ 'ಶಾಂತಂ' ಪಾತ್ರದಲ್ಲಿ ಕಾಣಿಸುವರು. ವರ್ಷಕ್ಕೆ ಒಂದು ನಾಟಕವನ್ನು ಮಾಡುವುದು ಅಂದಿನ ಕಲಾವಿದರ ಹವ್ಯಾಸವಾಗಿತ್ತು.

‘ಯಾರ ವಿಶ್ವಾಸ ಯಾರಿಗೆ’ ನಾಟಕದಲ್ಲಿ ಮಂಗಳಾ ಪಾತ್ರದಲ್ಲಿ, ‘ಹೆಜ್ಜೆ ತಪ್ಪಿದ ಹೆಣ್ಣು’ ನಾಟಕದಲ್ಲಿ ಲಕ್ಷ್ಮೀ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. “ಮಲೆಮಗಳು” ನಾಟಕದಲ್ಲಿ ‘ಶಂಕರ’ನ ಪಾತ್ರದಲ್ಲಿ ಕಾಣಿಸಿಕೊಂಡರು. ಇವರು ಪುರುಷ ಪಾತ್ರದಲ್ಲಿ ಗುರುತಿಸಿಕೊಂಡ ಪ್ರಥಮ ನಾಟಕ ಇದಾಗಿದೆ. ಇಲ್ಲಿಂದ ಮುಂದೆ ಅವರು ಯಾವ ನಾಟಕದಲ್ಲಿಯೂ ಸ್ತ್ರೀವೇಷ ಧರಿಸುವುದಿಲ್ಲವೆಂದು ಅವರೇ ಹೇಳುತ್ತಾರೆ. “ಬಂಜೆಯ ತೊಟ್ಟಿಲು” ನಾಟಕದಲ್ಲಿ ಬಲವಂತ ಎಂಬ ಪಾತ್ರದಲ್ಲಿ ಗುರುತಿಸಿಕೊಳ್ಳುವರು. “ಬದುಕು ಬಂಗಾರವಾಯಿತು” ಎಂಬ ನಾಟಕದಲ್ಲಿ ಗೌರೀಶನ ಪಾತ್ರದಲ್ಲಿ, “ದೀಪಾವಳಿ” ನಾಟಕದಲ್ಲಿ ರಾಜಕುಮಾರ ಪಾತ್ರದಲ್ಲಿ ಗುರುತಿಸಿಕೊಂಡರು. ಇದು ಅವರ ಕೊನೆಯ ನಾಟಕ. ಮುಂದೆ ಅವರು ನಾಟಕವನ್ನು ಬಿಟ್ಟು ಬಯಲಾಟಕ್ಕೆ ಸೇರಿಕೊಳ್ಳುತ್ತಾರೆ.

ಬಾಬು ಬೆಳ್ಳುಬ್ಬಿ ಅವರು 1983ರಲ್ಲಿ ಬಯಲಾಟಕ್ಕೆ ಸೇರಿಕೊಳ್ಳುತ್ತಾರೆ. ಈ ಬಯಲಾಟದ ಹೆಸರು ‘ಹನುಮಾನ ನಾಟಕ ಸಂಘ’ ಆಸಂಗಿ. ಇದರ ಮಾಲೀಕರು ಸಿದ್ರಾಯಪ್ಪ ದರೂರ. “ವಿಜಯಲಕ್ಷ್ಮೀ” ಇವರ ಮೊದಲ ಬಯಲಾಟ. ಇದೊಂದು ಪೌರಾಣಿಕ ಬಯಲಾಟ. ಇಲ್ಲಿ ಪ್ರತಾಪಸಿಂಹ ಮಹಾರಾಜನ ಪಾತ್ರದಲ್ಲಿ ಮೊದಲಬಾರಿಗೆ ಪ್ರೇಕ್ಷಕರ ಎದುರು ಕಾಣಿಸಿಕೊಳ್ಳುವರು. ಈ ಒಂದೇ ಬಯಲಾಟವನ್ನು ಸತತವಾಗಿ ಮೂರು ವರ್ಷಗಳ ಕಾಲ ಬೇರೆ ಬೇರೆ ಕಡೆಗೆ ಆಡುವರು. ಈ ಕಂಪನಿ ಮುಂದೆ ನಿಂತು ಹೋಯಿತು. ಮುಂದೆ ಇವರಿಗೆ ರಬಕವಿಯ ರೇಣುಕಾ ನಾಟಕ ಸಂಘದವರಿಂದ ಕರೆ ಬಂತು. ಈ ಸಂಘದ ಮಾಲೀಕರು ಹನಮಂತ ಗೋಲಬಾವಿ ಇವರ ನೇತೃತ್ವದಲ್ಲಿ 7 ವರ್ಷಗಳ ಕಾಲ ವಿವಿಧ ಬಯಲಾಟಗಳನ್ನು ಆಡುವರು. ಇವರು ಆಡಿದ ಬಯಲಾಟಗಳು ಪೌರಾಣಿಕ, ಐತಿಹಾಸಿಕ ಮತ್ತು ಕೌಟುಂಬಿಕ ಮತ್ತು ಸಾಮಾಜಿಕ ವಸ್ತುಗಳನ್ನು ಒಳಗೊಂಡಿವೆ.

“ರೇಣುಕಾ ಯಲ್ಲಮ್ಮ” ಬಯಲಾಟದಲ್ಲಿ ಪರಶುರಾಮ ಪಾತ್ರದಲ್ಲಿ, “ಸಿಂಧೂರ ಲಕ್ಷ್ಮಣ” ಬಯಲಾಟದಲ್ಲಿ ನರಸಿಂಹ ಪಾತ್ರದಲ್ಲಿ, “ಚನ್ನಪ್ಪ ಚನಗೌಡ” ಬಯಲಾಟದಲ್ಲಿ ಡಾಕ್ಟರನ ಪಾತ್ರದಲ್ಲಿ, “ನಾಗರ ಪಂಚಮಿ” ಬಯಲಾಟದಲ್ಲಿ ರಾಜಶೇಖರನ ಪಾತ್ರದಲ್ಲಿ ಕಾಣಿಸಿಕೊಳ್ಳುವರು. ಇದು ಇವರ ಕೊನೆಯ ಬಯಲಾಟವಾಯಿತು. ಕ್ರಿ.ಶ. 1993 ರಲ್ಲಿ ರೇಣುಕಾ ನಾಟ್ಯಸಂಘ ರಬಕವಿ ಈ ಕಂಪನಿಯನ್ನು ಬಿಟ್ಟು ಆಸಂಗಿಯ ಜಗದೀಶ್ವರ ನಾಟ್ಯ ಸಂಘವನ್ನು ಸೇರಿಕೊಳ್ಳುವರು. ಅಲ್ಲಿಂದ ಇಲ್ಲಿಯವರೆಗೆ ಅಂದರೆ 25 ವರ್ಷಗಳ ಕಾಲ ಈ ಸಂಘದಲ್ಲಿಯೇ ಮುಂದುವರೆಯುತ್ತಿದ್ದಾರೆ. ಅದು “ಲವಕುಶ” ಬಯಲಾಟದಲ್ಲಿ ರಾಮನ ವೇಷದಲ್ಲಿ ಕಾಣಿಸಿಕೊಳ್ಳುತ್ತಿರುವರು. ಇಷ್ಟು ವರ್ಷಗಳ ಕಾಲ ಏಕೆ ನೀವು ಒಂದೇ ಪಾತ್ರದಲ್ಲಿ ಮುಂದುವರೆಯುತ್ತಿರಿ ಎಂದು ಕೇಳಿದಾಗ ಈ ಪಾತ್ರ ನಂಗೆ ತುಂಬಾ ಹೆಮ್ಮೆ ತಂದ ಪಾತ್ರ. ಈ ಪಾತ್ರದಲ್ಲಿ ನಾನು ವೇಷಧರಿಸಿದರೆ ಜನ ನನ್ನನ್ನು ದೇವರೆಂದು ಗುರುತಿಸಿ ನಮಸ್ಕರಿಸುತ್ತಾರೆ. ಇಂತಹ ಪಾತ್ರವನ್ನು ಬಿಟ್ಟು ನಾನು ಬೇರೆ ಪಾತ್ರವನ್ನು ಮಾಡುವುದಿಲ್ಲ ಎನ್ನುವರು. ಆ ಪಾತ್ರವನ್ನು ಬಿಟ್ಟರೆ ಯಾವ ಆಟವನ್ನು ಆಡದೇ ಮನೆಯಲ್ಲೇ ಇರುವುದಾಗಿ ಹೇಳಿದ್ದು

ಕಂಡುಬರುತ್ತದೆ.

ಕ್ರಿ.ಶ. 1960 ರಿಂದ ಆಸಂಗಿಯಲ್ಲಿ ‘ಲವಕುಶ’ ಬಯಲಾಟ ಆರಂಭವಾಗಿದ್ದು, 28 ವರ್ಷಗಳು ದಾಟಿದರೂ ಯಾವ ಕಳಂಕವಿಲ್ಲದೇ ಈ ಆಟ ಇನ್ನೂ ಮುಂದುವರೆದಿದೆ. ಇದು ನಮಗೆ ತುಂಬಾ ಸಂತೋಷ ತಂದ ವಿಷಯವೆಂದು ಹೇಳುತ್ತಾರೆ. ಇವರು ಒಂದು ವರ್ಷದಲ್ಲಿ 40–50 ಪ್ರದರ್ಶನಗಳನ್ನು ಈಗಲೂ ನೀಡುತ್ತಿರುವರೆಂದು ಹೇಳುವರು. ಇಂಡಿ, ಕೊಲ್ಹಾಪೂರ, ಬೆಳಗಾವಿ, ಜತ್ತ, ಬಾಗಲಕೋಟ, ಅಕ್ಕಲಕೋಟ, ಸೊಲ್ಲಾಪೂರ, ಗಡಹಿಂಗ್ಲಜ, ಬಸವನಬಾಗೇವಾಡಿ, ಕುಮದಿ, ಸೊನ್ನಲಗಿ ಈ ಪ್ರದೇಶಗಳನ್ನು ಒಳಗೊಂಡು ಈ ಸುತ್ತಮುತ್ತಲಿನ ಎಲ್ಲ ಕಡೆಗಳಲ್ಲಿಯೂ ತಮ್ಮ ಕಲೆಯನ್ನು ಪ್ರದರ್ಶಿಸಿದ್ದಾರೆ. ಬಾಬುರವರು ಹವ್ಯಾಸಿ ಕಲಾವಿದರು. ಪ್ರಾರಂಭದಲ್ಲಿ ಹಣ ಕೂಡಿಸಿ ಪ್ರತಿವರ್ಷ ಒಂದೊಂದು ಆಟವನ್ನು ನಡೆಸುತ್ತಿದ್ದರು. ನಾಟಕವನ್ನು ಮಾಡುವ ಸಂದರ್ಭದಲ್ಲಿ ಅವರಿಗೆ ತುಂಬಾ ಹಣದ ತೊಂದರೆ ಆದರೂ ಪ್ರತಿವರ್ಷ ಒಂದೊಂದು ಹೊಸ ಆಟವನ್ನು ಮಾಡುತ್ತಿದ್ದು, ಅವರು ಕಲೆಯ ಮೇಲೆ ಇಟ್ಟ ಗೌರವ ಪ್ರೀತಿಯ ಪ್ರತೀಕವಾಗಿದೆ. ಬಯಲಾಟವನ್ನು ಆಡಲು ಆರಂಭಿಸಿದಾಗ ಅವರಿಗೆ ಒಂದೊಂದಕ್ಕೆ 40 ರಿಂದ 45 ರೂಪಾಯಿ ಹಣ ಸಿಗುತ್ತಿತ್ತಂತೆ.

ಈಗೀನ ಹಾಗೆ ಮೊದಲು ಸಂಚಾರದ ಅನುಕೂಲತೆ ಇರಲಿಲ್ಲ. ಆಗ ಅವರನ್ನು ಎತ್ತಿನ ಗಾಡಿಯಲ್ಲಿ ಕರೆದುಕೊಂಡು ಹೋಗುವುದು ರೂಢಿಯಲ್ಲಿತ್ತು. ಕೆಲವೊಮ್ಮೆ ಬಸ್ಸಿನಲ್ಲಿ ಹೋಗುತ್ತಿದ್ದರು. ಆಟವನ್ನು ರಾತ್ರಿ 10 ರಿಂದ ಬೆಳಿಗ್ಗೆ 6 ಗಂಟೆವರೆಗೆ ನಡೆಸುತ್ತಿದ್ದರು. ಒಮ್ಮೊಮ್ಮೆ ಮುಂಜಾನೆ 8 ಗಂಟೆವರೆಗೂ ಆಡಿದ ಪ್ರಸಂಗಗಳನ್ನು ನೆನಪಿಸಿಕೊಳ್ಳುತ್ತಾರೆ. ಇಂತಹ ಅಪರೂಪದ ಕಲಾವಿದ ಸುಮಾರು ನಾಲ್ಕು ದಶಕಗಳವರೆಗೆ ತಮ್ಮ ಪ್ರದರ್ಶನಗಳನ್ನು ನೀಡುತ್ತಾ ಬಂದಿರುವುದು ಹೆಮ್ಮೆಯ ಸಂಗತಿ. ಒಬ್ಬ ಮುಸ್ಲಿಂ ಕಲಾವಿದ ಇಷ್ಟು ವರ್ಷಗಳ ಕಾಲ ಯಾವುದೇ ಕಳಂಕವಿಲ್ಲದೇ ಹಿಂದುಗಳ ಜೊತೆಗೆ ಆಟವಾಡಿ ಭಾವೈಕ್ಯತೆಯನ್ನು ಮೆರೆದಿದ್ದಾರೆ. ಅವರ ವೇಷ ಭೂಷಣ, ಅವರ ಇರುವಿಕೆಯನ್ನು ಗಮನಿಸಿದಾಗ ಯಾರೊಬ್ಬರೂ ಇವರೊಬ್ಬ ಮುಸ್ಲಿಂ ಎಂದು ಗುರುತಿಸಲಿಕ್ಕೆ ಸಾಧ್ಯವಿಲ್ಲ. ಅವರ ಮಕ್ಕಳ ಇರುವಿಕೆಯೂ ಅದೇ ತರಹ. ಇವರು ಕಲೆಯ ಜೊತೆಗೆ ಸಾಕಷ್ಟು ಭಕ್ತಿಗೀತೆಗಳನ್ನು ಸ್ವತಃ ರಚಿಸಿ, ಸಂಯೋಜನೆಯನ್ನು ಮಾಡಿರುವರು. ಇವರು ಬಂಥಿಗಣಿ ಬಸವಣ್ಣನ ಪರಮ ಭಕ್ತರು. ಪ್ರತಿ ಅಮವಾಸ್ಯೆ ಹಾಗೂ ಬಿಡುವಿನ ವೇಳೆಯಲ್ಲಿ ಈಗಲೂ ಹೋಗುತ್ತಾರೆ. ಸಿದ್ಧೇಶ್ವರ ಸ್ವಾಮಿ ಮತ್ತು ಅನ್ನದಾನೇಶ್ವರ ಮೇಲೆ ಭಕ್ತಿ ಗೀತೆಗಳನ್ನು ರಚಿಸಿರುವರು. ಇಷ್ಟೆಲ್ಲಾ ಸಾಧನೆ ಮಾಡಿದ ಒಬ್ಬ ಕಲಾವಿದ ಬೆಳಕಿಗೆ ಬಾರದೇ ಇರುವುದು ದುರದೃಷ್ಟಕರ ಸಂಗತಿ. ಇಷ್ಟು ವರ್ಷಗಳ ಕಾಲ ‘ಕಲಾಸೇವೆ’ಯನ್ನು ಮಾಡಿದರೂ ಸರಕಾರದಿಂದ ಯಾವುದೇ ಸಹಾಯ ದೊರೆತಿರಲಿಲ್ಲ. ಈಗ ಎರಡು ವರ್ಷಗಳಿಂದ ಗದ್ದಿಗೌಡರು, ಸಿದ್ದು ಸವದಿ, ಕಾರಜೋಳ ಹಾಗೂ ಕುಡಚಿಯ ಶಾಸಕ ಪಿ.ರಾಜೀವರವರ ಸಹಕಾರದಿಂದ ಪ್ರತಿತಿಂಗಳು ರೂ. 1500 ರಾಜ್ಯ ಸರಕಾರದಿಂದ ಮಾಶಾಸನ ಬರುತ್ತಿದ್ದು, ನನಗೆ ತುಂಬಾ ಸಂತೋಷವೆನಿಸುತ್ತದೆ ಎನ್ನುತ್ತಾರೆ. ಸುಮಾರು 25 ವರ್ಷಗಳ ಕಾಲ ಲವಕುಶ ಬಯಲಾಟದಲ್ಲಿ ರಾಮನ ಪಾತ್ರದಲ್ಲಿ ಕಾಣಿಸಿಕೊಂಡವರು. ಅಖಂಡವಾಗಿ 45 ವರ್ಷ ಕಲಾಸೇವೆಯೆನ್ನು ಮಾಡಿದ ಇವರು. ಈ ಕಲೆ ನಶಿಸಬಾರದೆಂಬ ಕಾಳಜಿಯನ್ನು ವ್ಯಕ್ತಪಡಿಸುತ್ತಾರೆ. ಇವರ ಬಯಲಾಟ ತಂಡವು ಈಗಲೂ ಸತತವಾಗಿ ಕಲಾ ಸೇವೆಯನ್ನು ಮುಂದುವರೆಸಿಕೊಂಡು ಬರುತ್ತಿದೆ. ಇವರ ಕಲೆಯನ್ನು ನೋಡಿ ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿ ಪ್ರಮಾಣಪತ್ರ, ಪ್ರಶಸ್ತಿಪತ್ರ ಮತ್ತು ಸನ್ಮಾನ ಪತ್ರಗಳನ್ನು ನೀಡಿ ಗೌರವಿಸಿವೆ.

ದೂರದರ್ಶನದ ಪ್ರಭಾವದಿಂದ ಬಯಲಾಟಗಳು ಕಣ್ಮರೆಯಾಗುತ್ತಿರುವುದು ತುಂಬಾ ಆತಂಕದ ವಿಷಯ. ಈ ಕಲೆಯು ಉಳಿದು ಬೆಳೆಯಬೇಕೆಂಬುದು ಇವರ ಆಸೆ. ಬಾಬು ಬೆಳ್ಳುಬ್ಬಿಯವರು ಯಾರಾದರು ಕಲಿಯಲು ಮುಂದೆ ಬಂದರೆ ಈ ಆಟವನ್ನು ಕಲಿಸುತ್ತೇವೆ ಎನ್ನುತ್ತಾರೆ. ನೀವು ಇಲ್ಲಿಯವರೆಗೆ ಎಷ್ಟು ಪ್ರಯೋಗಗಳನ್ನು ನೀಡಿದ್ದೀರಿ ಎಂದರೆ ಅದು ಲೆಕ್ಕಕ್ಕೆ ಸಿಗದ ಮಾತು ಎನ್ನುತ್ತಾರೆ. ಪ್ರಯೋಗ ಮಾಡುವಾಗ ಸಿಗುವಂತಹ ಆನಂದ, ಜನರ ಸ್ಪಂದನ ಹೇಳತೀರದು. ಒಟ್ಟಾರೆ ಈ ಆಟ ಆಡುವುದರಿಂದ ನಿಮಗೆ

ಸಿಗುವ ಲಾಭವೇನು ಎಂದು ಕೇಳಿದಾಗ ಕಲಾ ಸೇವೆಯಿಂದ ನೆಮ್ಮದಿಯಿದೆ. ಈಗ ಆರ್ಥಿಕವಾಗಿಯೂ ಅನುಕೂಲವಾಗಿದೆ ಎನ್ನುತ್ತಾರೆ. ಒಟ್ಟಿನಲ್ಲಿ ಬಾಬು ಬೆಳ್ಳುಬ್ಬಿ ಅವರ ಕಲಾ ಸೇವೆ ನಿಸ್ವಾರ್ಥದಿಂದ ಕೂಡಿದ್ದು ಕಲೆಯನ್ನೇ ತಮ್ಮ ಬದುಕಾಗಿ ಬದುಕುತ್ತಿದ್ದುದು ತುಂಬಾ ಅಭಿಮಾನದ ಸಂಗತಿ. ಇಂತ ಪ್ರತಿಭಾವಂತ ಕಲಾವಿದನಿಗೆ ಸರಕಾರದಿಂದ ಸಿಗುವಂತಹ ಪ್ರಶಸ್ತಿಗಳು ಸಿಕ್ಕಿರುವುದಿಲ್ಲ. ಇನ್ನು ಮೇಲಾದರೂ ಇವರಿಗೆ ಸರಕಾರದಿಂದ ಗೌರವ ಸಿಗುವಂತಾಗಬೇಕು. ಈಗ ಸಿಗುವ ಮಾಶಾಸನವನ್ನು ಹೆಚ್ಚಿಸಿ, ಇಂತಹ ಕಲಾವಿದರನ್ನು ಬೆಳಿಸಿ, ಪುರಸ್ಕರಿಸುವ ಕೆಲಸವಾಗಬೇಕಾಗಿದೆ.